# ಸೇನೆಗೆ ಡಿಆರ್‌ಡಿಒ ಚಾಫ್ ಬಲ!

■ **ಶಶಿಕುಮಾರ್ ಸಿ.**

ದೇಶದ ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಸುಧಾರಿತ 'ಚಾಫ್' ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಭಾರತೀಯ ವಾಯುಪಡೆಗೆ ಹಸ್ತಾಂತರಿಸಿದ್ದು, ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಕ್ರಿಯೆಗಳು ಪ್ರಾರಂಭವಾಗಿದೆ.

'ಚಾಫ್ ಮೆಟೀರಿಯಲ್' ಹಾಗೂ 'ಚಾಫ್ ಕಾರ್ಟ್ರಿಡ್ಜ್–118/I' ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ಹೊಸ ತಂತ್ರಜ್ಞಾನ. ಇದು ಯಶಸ್ವಿಯಾಗಿ ಕಾರ್ಯಗತಗೊಂಡಲ್ಲಿ ದೇಶದ ಯುದ್ಧ ವಿಮಾನಗಳ ಸುರಕ್ಷತೆಗೆ ಮತ್ತಷ್ಟು ಇಂಬು ಸಿಕ್ಕಂತಾಗುತ್ತದೆ. ಭಾರತೀಯ ವಾಯುಪಡೆಗೆ (ಐಎಎಫ್) ಗುಣಾತ್ಮಕ ಅವಶ್ಯಕತೆಗಳನ್ನು ಪೂರೈಸಲಿರುವ ಈ ತಂತ್ರಜ್ಞಾನವು ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ.




ಚಾಫ್ ತಂತ್ರಜ್ಞಾನದಲ್ಲಿ ಹೆಚ್ಚು ಮಹತ್ವ ಪಡೆದಿರುವುದು, ಶತ್ರುಗಳ ರೇಡಾರ್ ನಿರ್ದೇಶಿತ ಕ್ಷಿಪಣಿ ದಾಳಿಯ ದಿಕ್ಕುತಪ್ಪಿಸುವ ಸಾಮರ್ಥ್ಯ ಒಳಗೊಂಡಿರುವುದು. ಯುದ್ಧ ಸಂದರ್ಭದಲ್ಲಿ ಶತ್ರುಗಳು ಕ್ಷಿಪಣಿ ದಾಳಿ ನಡೆಸುವುದು ಸಹಜ. ಆ ಸಮಯದಲ್ಲಿ ಅವುಗಳ ಗುರಿಯನ್ನು ಬೇರೆಡೆಗೆ ಪರಿವರ್ತಿಸಿ ತನ್ನನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನು ಹೊಸ ತಂತ್ರಜ್ಞಾನ ಹೊಂದಿದೆ.

ಯುದ್ಧದಂತಹ ಸಂದಿಗ್ಧ ಸ್ಥಿತಿಯಲ್ಲಿ ಭಾರತೀಯ ವಾಯುಪಡೆಗೆ ಈ ತಂತ್ರಜ್ಞಾನವು ವರದಾನವಾಗಿದ್ದು, ಈ ತಂತ್ರಜ್ಞಾನದ ಅಳವಡಿಕೆ ಕಾರ್ಯವು ಸದ್ಯ ಪ್ರಾಯೋಗಿಕ ಹಂತದಲ್ಲಿದೆ. ಇದು ಪರಿಪೂರ್ಣವಾಗಿ ಯಶಸ್ವಿಯಾದ ಬಳಿಕ ಎಲ್ಲ ಯುದ್ಧ ವಿಮಾನಗಳಲ್ಲೂ ಅಳವಡಿಕೆಯಾಗಲಿದೆ ಎಂದು ಡಿಆರ್‌ಡಿಒ ತಿಳಿಸಿದೆ.

'ನಮ್ಮ ಯುದ್ಧವಿಮಾನಗಳನ್ನು ಶತ್ರುಗಳ ಯಾವುದೇ ಆಕ್ರಮಣದಿಂದ ಚಾಫ್ ತಂತ್ರಜ್ಞಾನದ ನೆರವಿನೊಂದಿಗೆ ಇನ್ನಷ್ಟು ಸುರಕ್ಷಿತಗೊಳಿಸಬಹುದು. ಹಾಗಾಗಿ, ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಈ ತಂತ್ರಜ್ಞಾನ ಆಧಾರಿತ ಸಾಮಗ್ರಿಗಳನ್ನು ಉತ್ಪಾದಿಸಲು ಸಂಬಂಧಪಟ್ಟ ಕೈಗಾರಿಕೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ವಾಯುಪಡೆ ತಿಳಿಸಿದೆ. ■

# ವಾಟ್ಸ್‌ಆ್ಯಪ್

## 46 ದಿನದಲ್ಲಿ 30 ಲಕ್ಷ ಖಾತೆ ನಿಷೇಧ!

ಕೇವಲ 46 ದಿನಗಳ ಅವಧಿಯಲ್ಲಿ 30,27,000 ವಾಟ್ಸ್‌ಆ್ಯಪ್ ಖಾತೆಗಳನ್ನು ನಿಷೇಧಗೊಳಿಸಿರುವುದಾಗಿ ವಾಟ್ಸ್‌ಆ್ಯಪ್ ಪ್ರಕಟಿಸಿದೆ! ದಿನೇ ದಿನೇ ತನ್ನ ಬಳಕೆದಾರರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಇರುವ ವಾಟ್ಸ್‌ಆ್ಯಪ್, ಸುಮಾರು 30 ಲಕ್ಷಕ್ಕೂ ಅಧಿಕ ಖಾತೆಗಳನ್ನು ನಿಷೇಧಿಸಿದ್ದಾದರೂ ಯಾಕೆ? ಅದಕ್ಕೆ ಕಾರಣ, ದೇಶದ ಮಾಹಿತಿ ತಂತ್ರಜ್ಞಾನ ಇಲಾಖೆಯ ಹೊಸ ನಿಯಮ.

ಕಳೆದ ಜೂನ್ 16ರಿಂದ ಜುಲೈ 31ರವರೆಗಿನ 46 ದಿನಗಳ ಅವಧಿಯಲ್ಲಿ ಭಾರತೀಯರ ವಾಟ್ಸ್‌ಆ್ಯಪ್ ಖಾತೆಗಳನ್ನು ನಿಷೇಧಿಸಲಾಗಿದೆ ಎಂದು ವಾಟ್ಸ್‌ಆ್ಯಪ್ ಹೇಳಿದೆ. ಸರ್ಕಾರದ ಹೊಸ ಐಟಿ ನಿಯಮದ ಅನ್ವಯ ಬಳಕೆದಾರರ ಸುರಕ್ಷತಾ ವರದಿಯನ್ನು ನೀಡಿದ್ದು, ಅದರಲ್ಲಿ ಈ ಖಾತೆಗಳ ನಿಷೇಧದ ಮಾಹಿತಿಯನ್ನೂ ಒದಗಿಸಿದೆ.



ಭಾರತ ಸರ್ಕಾರದ ಇತ್ತೀಚಿನ ಮಾಹಿತಿ ತಂತ್ರಜ್ಞಾನ ನಿಯಮದಡಿ, ದುರುದ್ದೇಶಪೂರಿತ ಹಾಗೂ ಕಾನೂನು ಬಾಹಿರ ಚಟುವಟಿಕೆ ನಡೆಸುವ ಖಾತೆಗಳ ವಿರುದ್ಧ ವಾಟ್ಸ್‌ಆ್ಯಪ್ ಕ್ರಮವನ್ನು ಕೈಗೊಳ್ಳಲೇಬೇಕಾಯಿತು. ಹಾಗಾಗಿ ಆ ಖಾತೆಗಳು ಬ್ಲಾಕ್ ಆಗಿವೆ. ಈ ಬಗ್ಗೆ ಸ್ಪಷ್ಟನೆ ನೀಡಿರುವ ವಾಟ್ಸ್‌ಆ್ಯಪ್, 'ನಾವು ನಮ್ಮ ಬಳಕೆದಾರರ ಬಗ್ಗೆ ಸಾಕಷ್ಟು ಕಾಳಜಿ ವಹಿಸುತ್ತೇವೆ. ವಾಟ್ಸ್‌ಆ್ಯಪ್ ಸೇವೆ ಬಳಸುತ್ತಿರುವ ಬಳಕೆದಾರರನ್ನು ಸುರಕ್ಷಿತವಾಗಿರಿಸಲು ನಾವು ಸದಾ ಪ್ರಯತ್ನಿಸುತ್ತಲೇ ಇದ್ದೇವೆ. ಆದಾಗ್ಯೂ, ನಿಯಮ ಪಾಲನೆ ಮಾಡದ, ದುರುದ್ದೇಶಪೂರಿತ ಹಾಗೂ ಕಾನೂನು ಬಾಹಿರ ಚಟುವಟಿಕೆ ನಡೆಸುವ ಖಾತೆಗಳ ವಿರುದ್ಧ ಕ್ರಮವನ್ನು ಕೈಗೊಂಡಿದ್ದೇವೆ' ಎಂದಿದೆ.

'ವಾಟ್ಸ್‌ಆ್ಯಪ್ ಬಳಕೆದಾರರನ್ನು ಸುರಕ್ಷಿತವಾಗಿರಿಸಲು ನಾವು ಹೊಸ ಮಾದರಿಯ ತಂತ್ರಜ್ಞಾನ, ಡೇಟಾ ಸೈಂಟಿಸ್ಟ್ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ಹೊಸ ಪ್ರಯತ್ನ ಮಾಡುತ್ತಲೇ ಇದ್ದೇವೆ. ಸುಳ್ಳುಸುದ್ದಿಗಳನ್ನು ಹರಡುವ, ಖಾತೆಯ ಮೂಲಕ ಅಪರಾಧ ಕೃತ್ಯಗಳನ್ನು ಎಸಗುವ ಅಥವಾ ಇನ್ನ್ಯಾವುದೇ ದುರುದ್ದೇಶಪೂರಿತ ಹಾಗೂ ಕಾನೂನು ಬಾಹಿರ ಚಟುವಟಿಕೆ ನಡೆಸುವ ಖಾತೆಯನ್ನು ಪತ್ತೆಹಚ್ಚಿದ್ದು, ಅಂತಹ ಖಾತೆಗಳನ್ನು ಯಾವುದೇ ಮುಲಾಜಿಲ್ಲದೆ ನಿಷೇಧಿಸಿದ್ದೇವೆ. ಮುಂದೆಯೂ ನಿಷೇಧಿಸುತ್ತೇವೆ' ಎಂದು ವಾಟ್ಸ್‌ಆ್ಯಪ್ ತಿಳಿಸಿದೆ.

ಬಳಕೆದಾರರ ದೂರುಗಳ ಬಗ್ಗೆ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಮಾಹಿತಿ ನೀಡಿರುವ ವಾಟ್ಸ್‌ಆ್ಯಪ್, 'ನೇರ ವಿನಂತಿ ವಿವರಗಳನ್ನು ಮತ್ತು ವಾಟ್ಸ್‌ಆ್ಯಪ್ ಮೂಲಕ ತೆಗೆದುಕೊಂಡ ಕ್ರಮಗಳ ಬಗ್ಗೆ ಮಾಹಿತಿ ತಂತ್ರಜ್ಞಾನ ಇಲಾಖೆಗೆ ವಿವರ ಸಲ್ಲಿಸಿದ್ದೇವೆ. ಇಮೇಲ್‌ಗಳ ಮೂಲಕ ಮತ್ತು ಅಂಚೆ ಮೂಲಕ ವಾಟ್ಸ್‌ಆ್ಯಪ್‌ಗೆ ಸಂಬಂಧಿಸಿದ 137 ವಿನಂತಿಗಳನ್ನು ಸ್ವೀಕರಿಸಲಾಗಿದೆ. ಭಾರತದಲ್ಲಿ ಈ ರೀತಿಯಾಗಿ 316 ಮೇಲ್ಮನವಿಗಳನ್ನು ಸ್ವೀಕರಿಸಿದ್ದು, ಅದರಲ್ಲಿ 73 ಖಾತೆಗಳನ್ನು ಬ್ಯಾನ್ ಮಾಡಲಾಗಿದೆ' ಎನ್ನಲಾಗಿದೆ. ■